ಕೊಟ್ಟು ಅವರು ಸ್ವಯಂ ಉದ್ಯೋಗವನ್ನು ಮಾಡುವಂತಹದ್ದು ಘೋಷಣೆ ಮಾತ್ರ ಇದೆ. ಆದರೆ ಪರಿಸ್ಥಿತಿಯನ್ನು ನೋಡಿದಾಗ ಈಗ ಕೆಳಗಿನ ಮಟ್ಟದಲ್ಲಿ ಏನೂ ಕೆಲಸ ಆಗಿಲ್ಲ. ಇದಕ್ಕಾಗಿ ಅರ್ಜಿಯನ್ನು ತಯಾರು ಮಾಡುವ ಸಲುವಾಗಿ ಆದಕ್ಕೆ ಬೇಕಾದ ವಿವರಗಳನ್ನು ಒದಗಿಸುವ ಸಲುವಾಗಿ ಬೇಕಾದಂತಹ ಖರ್ಚುಗಳನ್ನು ಆ ಹುಡುಗರು ಭರಿಸುವಂತಹ ಸ್ಥಿತಿಯಲ್ಲಿ ಇಲ್ಲ, ಆ ಒಂದು ಅರ್ಜಿಯನ್ನು ತಯಾರು ಮಾಡುವ ಸಲುವಾಗಿ ಅವರ ಹಳ್ಳಿಯಿಂದ ತಾಲ್ಲೂಕು ಕೇಂದ್ರಕ್ಕೆ ಮತ್ತು ತಾಲ್ಲೂಕು ಕೇಂದ್ರದಿಂದ ಜಿಲ್ಲಾ ಕೇಂದ್ರಕ್ಕೆ ಬರಬೇಕಾಗಿದೆ. ಇದರಿಂದ ಅನೇಕ ಯುವಕರು ಜಿಗುಪ್ಸೆಗೊಂಡು ಮುಂದೆ ಬರುತ್ತಿಲ್ಲ, ಅಂತಹ ಹುಡುಗರಿಗೆ ಸಹಾಯ ಮಾಡಬೇಕೆಂದು ಈ ಮುಖಾಂತರ ತಿಳಿಸುತ್ತಿದ್ದೇನೆ.

ಮತ್ತೆ ಎನ್. ಆರ್. ಇ. ಪಿ., ಹಾಗೂ ಐ. ಆರ್. ಡಿ. ಪಿ. ಕಾರ್ಯಕ್ರಮದ ವಿಚಾರದ ಬಗ್ಗೆ ಹೇಳುವುದಾದರೆ, ಇದಕ್ಕಾಗಿ ಹೆಚ್ಚು ಹಣವನ್ನು ಒದಗಿಸಬೇಕು. ಕಳೆದ ತಿಂಗಳಿಂದ ಕೆಲಸ ಸಂಪೂರ್ಣವಾಗಿ ನಿಂತು ಹೋಗಿದೆ. ಅದಕ್ಕಾಗಿ ಖರ್ಚು ಮಾಡುವುದಕ್ಕೆ ಹಣ ಕೂಡ ಇಲ್ಲ. ಇದರ ಕಡೆಗೆ ಸರ್ಕಾರ ವಿಶೇಷ ಗಮನ ಹರಿಸಿ ಮುಂದೆ ಬರುವಂತಹ ವರ್ಷಗಳಲ್ಲಿ ಇದಕ್ಕಾಗಿ ಹಣವನ್ನು ಒದಗಿಸಿ ಕೆಲವು ಯೋಜನೆಯನ್ನು ಪೂರ್ಣಮಾಡಿ ಎಂದು ಹೇಳುತ್ತಿದ್ದೇನೆ. ಮತ್ತು ಜನತೆಯ ಆಶೆ ಆಕಾಂಕ್ಷೆಗಳನ್ನು ಈಡೇರಿಸುವ ಕಡೆ ಸರ್ಕಾರ ಗಮನ ಹರಿಸಬೇಕೆಂದು ಮತ್ತೊಮ್ಮೆ ಸಲಹೆ ಮಾಡುತ್ತಾ ನನಗೆ ಇಷ್ಟು ಸಮಯ ಮಾತನಾಡಲು ಅವಕಾಶ ಕೊಟ್ಟಂತಹ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಜಿ. ನಾರಾಯಣ ಕುಮಾರ್.— ನನಗೂ ಮಾತನಾಡಲು ಅವಕಾಶ ಕೊಡಿ.

ಸಭಾಧ್ಯಕ್ಷರು.— ನಿಮ್ಮ ಹೆಸರೂ ಇದೆ, ಆಮೇಲೆ ಕರೆಯುತ್ತೇನೆ.

ಶ್ರೀ ಜಿ. ನಾರಾಯಣ ಕುಮಾರ್.— ನಮಗೆ ಮಾತನಾಡುವುದಕ್ಕೆ ಸ್ವಾತಂತ್ರ್ಯ ಇಲ್ಲವೆಂದು ಅರ್ಥವೆ ? ನೀವು ಪಕ್ಷಾತೀತವಾಗಿ ಇರಬೇಕು, ಪಕ್ಷಪಾತ ತೋರಬಾರದು. ಇದು ವಾಕ್ ಸ್ವಾತಂತ್ರ್ಯಕ್ಕೆ ಧಕ್ಕೆ ತರತಕ್ಕ ನೀತಿಯಾದ್ದರಿಂದ ನಾನು ಇದರ ಬಗ್ಗೆ ಬಹಿಷ್ಕಾರ ಹಾಕಿ ಹೋಗುತ್ತಿದ್ದೇನೆ.

(ಶ್ರೀ ಜಿ. ನಾರಾಯಣ ಕುಮಾರ್‌ರವರು ಸಭಾತ್ಯಾಗ ಮಾಡಿದರು)

ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).— ಮಾನ್ಯ ಸಭಾಧ್ಯಕ್ಷರೇ, ಈಗಾಗಲೇ ಸಾಕಷ್ಟು ಮಂದಿ ಸದಸ್ಯರು ಮಾತನಾಡಿದ್ದಾರೆ. ವಿರೋಧ ಪಕ್ಷದ ಸದಸ್ಯರು ಅಂದರೆಲ್ಲಾ ಕೂಡ ಮುಖ್ಯವಾಗಿ ವೀರಪ್ಪ ಮೊಯಿಲಿಯವರು ಮತ್ತು ಬಂಗಾರಪ್ಪನವರು ಮಾತನಾಡಿದ್ದಾರೆ. ಅವರು ಮಾತನಾಡಿದ್ದು ಕೇಳಿದ ಮೇಲೆ ನಾನಾದರೂ ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಬೇಕೆಂದು ಇಚ್ಛೆಪಡುತ್ತೇನೆ. ಇವತ್ತಿನ ದಿವಸ, ರಾಜ್ಯಪಾಲರ ಭಾಷಣವನ್ನೇನು ನಮ್ಮ ಮುಂದಿಟ್ಟಿದ್ದಾರೆ ಇದರಿಂದ ಒಟ್ಟಾರೆ ನಮ್ಮ ಸರ್ಕಾರದ ಬಗ್ಗೆ ಏನು ಚಿತ್ರ ಬರುತ್ತದೆಂಬುದು ಮೊದಲನೆ ಪ್ರಶ್ನೆಯಾಗಿ ಬರುತ್ತದೆ. ರಾಜ್ಯಪಾಲರ ಭಾಷಣ ಔಪಚಾರಿಕವಾಗಿ ಮಾಡತಕ್ಕ ಭಾಷಣ ಎಂದರೆ ಸರಿಯಾದುದಲ್ಲ. ರಾಜ್ಯಪಾಲರ ಭಾಷಣದಲ್ಲಿ ನಮಗೆ ತಿಳಿದ ಮಟ್ಟಿಗೆ ಸರ್ಕಾರದ ನೀತಿ ಮತ್ತು ಧೋರಣೆಯನ್ನು ಪ್ರತಿಬಿಂಬಿಸತಕ್ಕ ವಿಚಾರ ಇರಬೇಕು ಮತ್ತು ಒಂದು ವರ್ಷದ ಅವಧಿಯಲ್ಲಿ ಸರ್ಕಾರ ಏನು ಒಂದು ಕೆಲಸ ಮಾಡಿದೆ ಅದನ್ನು ಪ್ರತಿಬಿಂಬಿಸುವ ವಿಚಾರ ಇರಬೇಕೆಂದು ನಾನು ತಿಳಿದುಕೊಂಡಿದ್ದೇನೆ. ಆ ಆಧಾರದ ಮೇಲೆ ಒಟ್ಟಾರೆ ಅದನ್ನು ಓದಿದ ಮೇಲೆ ನನಗಾದರೂ ಅನ್ನಿಸುವುದು ಈ ಸರ್ಕಾರದ ಬಗ್ಗೆ ನನ್ನ ಅಭಿಪ್ರಾಯ ಮತ್ತು ನಮ್ಮ ಪಕ್ಷದ ಅಭಿಪ್ರಾಯ ಕೂಡ, ಈ ಸರ್ಕಾರ ಕೆಲವು ಒಳ್ಳೆಯ ಕೆಲಸಗಳನ್ನು ಮಾಡಿರುವ ಸರ್ಕಾರ, ಅನೇಕ ಭರವಸೆಗಳನ್ನು ಕೊಟ್ಟಿರುವ ಸರ್ಕಾರ ಮತ್ತು ಭರವಸೆಗಳನ್ನು ಈಡೇರಿಸದೆ ಇರುವಂಥ ಸರ್ಕಾರ ಎಂಬುದೂ ನಮ್ಮ ಸ್ಪಷ್ಟ ಅಭಿಪ್ರಾಯ. ನಾನು ಎಲ್ಲ ಭರವಸೆಗಳ ಬಗ್ಗೆ ವಿಶ್ಲೇಷಣೆ ಮಾಡುವುದಕ್ಕೆ ಹೋಗುವುದಿಲ್ಲ, ಮಾಡುವುದಕ್ಕೆ ವೇಳೆ ಕೂಡ ಇಲ್ಲ. ಒಂದೇ ಒಂದು ವಿಷಯವನ್ನು ಪ್ರಸ್ತಾಪಿಸುವುದು ಏನೆಂದರೆ ಹಿಂದಿನ ಸರ್ಕಾರ ಮಾಡದೆ ಇರುವಂಥ ಒಂದೇ ಒಂದು ಒಳ್ಳೆಯ ಕೆಲಸವನ್ನು ಈ ಸರ್ಕಾರದವರು ಮಾಡಿದ್ದಾರೆ. ಅದೇನೆಂದರೆ, ಪುರಸಭೆ ಮತ್ತು ನಗರಸಭೆಗಳಿಗೆ ಚುನಾವಣೆ ನಡೆಸಿರತಕ್ಕದ್ದು. ಅದನ್ನು ಕೂಡ ರಾಜ್ಯಪಾಲರ ಭಾಷಣದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಅದರಲ್ಲಿ ಸ್ತ್ರೀಯರಿಗೆ 20 ಪರ್ಸೆಂಟ್ ಪ್ರಾತಿನಿಧ್ಯ ಕೊಟ್ಟಿರುವುದು ಮತ್ತು 18 ವರ್ಷ ವಯಸ್ಸಿನವರಿಗೆ ಮತದಾನದ ಹಕ್ಕು ಕೊಟ್ಟಿರುವುದು, ಒಳ್ಳೆಯದು. ಇದರಿಂದ ಉದ್ಭವವಾಗುವುದು ಏನೆಂದರೆ, ಪ್ರಜಾಪ್ರಭುತ್ವದ ಮೌಲ್ಯಗಳಿಗೆ ಜನತಾ ಪಕ್ಷದ ಸರ್ಕಾರವಾಗಲೀ ಅಥವಾ ಯಾವುದೇ ಸರ್ಕಾರ ಇದ್ದರೂ ಪ್ರಜಾಪ್ರಭುತ್ವದ ಕಾರ್ಯಕ್ರಮಗಳಿಗೆ ಬೆಂಬಲ ಕೊಡಬೇಕೆಂದು ಆಶಿಸುತ್ತೇನೆ. ಆ ರೀತಿ ಮೌಲ್ಯಗಳಿಗೆ ಜನತಾ ಸರ್ಕಾರ ಬೆಂಬಲ ಕೊಟ್ಟಿದೆಯೇ ಎಂದು ಪ್ರಶ್ನೆ. ಹಿಂದಿನ ಸರ್ಕಾರ ಬೆಂಬಲ ಕೊಟ್ಟಿದೆಯೆ ? ಅನೇಕ ವರ್ಷಗಳಿಂದ ಕೊಟ್ಟಿದ್ದಾರೆಯೆ ? ಈ ಸರ್ಕಾರ ಕೊಟ್ಟಿದೆಯೆ ? ಬಂಗಾರಪ್ಪನವರು ಮಾತನಾಡಿದ್ದನ್ನು ಕೇಳಿದೆ. ಅವರು ಹೇಳಿದರು, ಈ ಸರ್ಕಾರ ಏನೂ ಮಾಡಿಲ್ಲ, ರಣಹದ್ದು ತರಹ ಬಂದರು ಎಂದು. ಅಂಥ ಪದವನ್ನು ಮುಖ್ಯಮಂತ್ರಿಗಳ ವಿರುದ್ಧವಾಗಿ ಉಪಯೋಗಿಸಿದರು. ಅದನ್ನು ಕೇಳಿ ನನಗಂತೂ ಬಹಳ ಖೇದವಾಯಿತು, ಏಕೆಂದರೆ, ಅನೇಕ ವರ್ಷಗಳಿಂದ ಪಾರ್ಲಿಮೆಂಟರಿ ಪ್ರಜಾಪ್ರಭುತ್ವ ಪದ್ಧತಿಯಲ್ಲಿ ಪಳಗಿದಂತಹ ನಾಯಕರು ವಿಷಯಗಳನ್ನು ಚೆನ್ನಾಗಿ ತಿಳಿದುಕೊಂಡಿದ್ದಾರೆ, ಚೆನ್ನಾಗಿ ಮಾತನಾಡುತ್ತಾರೆಂದು ತಿಳಿದುಕೊಂಡಿದ್ದೆ. ಅವರು